ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ **07-01-2025**

ಪಾಟಿ ಸವಾಲುಃ ಶ್ರೀ. ಪಿ.ಕೆ.ಜಿ ವಕೀಲರಿಂದ

ನನಗೆ ವಾದಿಯ ಪರಿಚಯ ಇರುತ್ತದೆ. ವಾದಿಯ ತಂದೆ ದಾಸೇಗೌಡ ರವರ ಪರಿಚಯ ಇಲ್ಲ. ಸರ್ವೆ ನಂ.**148/2** ನನಗೆ ಸೇರಿದ ಆಸ್ತಿಯಾಗಿರುತ್ತದೆ. ಅದರ ಪಕ್ಕದಲ್ಲಿ ವಾದಿಯ ಜಾಗ ಇದೆ ಅದರಲ್ಲಿ ವಾದಿಯ ಮನೆ ಇದೆ ಎಂದರೆ ಸರಿ. ಸರ್ವೆ ನಂ.**148/2** ರಲ್ಲಿ **1** ಎಕರೆ ಜಾಗ ನನ್ನ ತಾಯಿ ಹೆಸರಿನಲ್ಲಿರುತ್ತದೆ. ಸರ್ವೆ ನಂ.**148/1** ಮತ್ತು **148/2** ರ ಮೂಲ ಸರ್ವೆ ನಂ.**148** ಎಂದರೆ ಸರಿ. ಈರಮ್ಮ ನನ್ನ ತಂದೆಯ ತಾಯಿ. ಸರ್ವೆ ನಂ.**148/2** ನ್ನು ದಾಸೇಗೌಡ ರವರ ತಂದೆಯಿಂದ ನನ್ನ ಅಜ್ಜಿ ಈರಮ್ಮ **1** ಎಕರೆ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನನ್ನ ಅಜ್ಜಿ ಮರಣದ ನಂತರ ಆಸ್ತಿ ನನ್ನ ತಂದೆಯಾದ ರಾಜಶೇಖರ್ ರವರ ಹೆಸರಿಗೆ ಖಾತೆ ಆಗಿತ್ತು. ನನ್ನ ತಂದೆ ಮರಣದ ನಂತರ ನನ್ನ ತಾಯಿ ಹೆಸರಿಗೆ ಖಾತೆ ಬಂದಿರುತ್ತದೆ.

ಈ ಜಾಗದಿಂದ ನಮ್ಮ ಮನೆ **500** ಮೀಟರ್ ದೂರದಲ್ಲಿರುತ್ತದೆ, ಅದು ಪೈಸಾರಿ ಜಾಗದಲ್ಲಿರುತ್ತದೆ. ಸರ್ವೆ ನಂ.**148/1** ಮತ್ತು **148/2** ರ ಜಾಗದ ಮದ್ಯದಲ್ಲಿ ಬೇಲಿ ಇರುತ್ತದೆ. ಸರ್ವೆ ನಂ.**148/2** ರ **1** ಎಕರೆ ಜಾಗಕ್ಕೆ ಮುಟ್ಟಿಕೊಂಡಂತೆ ನನಗೆ ಬೇರೆ ಜಾಗ ಇರುವುದಿಲ್ಲ. ಸರ್ವೆ ನಂ.**148/2** ರಲ್ಲಿ **1** ಎಕರೆ ಜಮೀನು ಇರುತ್ತದೆ. ಈ ದಾವೆ ಹಾಕಿದ ನಂತರ ನಾವು ಸರ್ವೆ ನಂ.**148/2** ರಲ್ಲಿ ಖಾಸಗಿ ಸರ್ವೆ ಮಾಡಿಸಿದ್ದು **1** ಎಕರೆ ಜಮೀನು ಮಾತ್ರ ಇರುತ್ತದೆ. ಆಗ

ಸರ್ವೆ ವರದಿ ಪಡೆದಿಲ್ಲ. ಈ ದಾವೆ ಹಾಕಿದ ನಂತರ ನಾವು ಸರ್ವೆ ಮಾಡಿಸಿರುತ್ತೇವೆ. ನಮ್ಮ ಬಳಿ ಹೆಚ್ಚುವರಿ ಜಾಗ ಇದೆ ಆದ ಕಾರಣದಿಂದ ಸರ್ವೆ ಸ್ಕೆಚ್ ಇಲ್ಲ ಎಂದು ತಿಳಿಸುತ್ತಿದ್ದೇನೆ ಎಂದರೆ ಸರಿಯಲ್ಲ. **1** ಎಕರೆ ಜಾಗ ಅಲ್ಲದೇ **42** ಸೆಂಟ್ ಜಾಗ ಹೆಚ್ಚುವರಿ ಜಾಗ ಇದೆ ಎಂದರೆ ಸರಿಯಲ್ಲ. **2** ರಿಂದ **5** ನೇ ಪ್ರತಿವಾದಿಗಳು ಗೊತ್ತಿರುತ್ತಾರೆ. ಸರ್ವೆ ನಂ.**148/1** ರಲ್ಲಿ **40** ಸೆಂಟ್ ಜಾಗವನ್ನು ಒತ್ತುವರಿ ಮಾಡಿದ್ದಾರೆ ಎಂದು ಹೇಳಿರುತ್ತಾರೆ ಆ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ.

ನಾನು ಸಹ **42** ಸೆಂಟ್ ಜಾಗ ಒತ್ತುವರಿ ಮಾಡಿದ ಬಗ್ಗೆ ಈ ದಾವೆ ಹೂಡಿದ್ದಾರೆ ಎಂದರೆ ಸರಿ. ಸರ್ವೆನಂ.**.148/1** ರಲ್ಲಿ **1.84** ಸೆಂಟ್ ಪೈಕಿ **0.82** ಸೆಂಟ್ ಆಸ್ತಿಯನ್ನು ಒತ್ತುವರಿ ಮಾಡಿದ ಕಾರಣ ವಾದಿಗೆ ಜಾಗ ತನ್ನ ಜಾಗ ಕಡಿಮೆ ಇದೆ ಎಂದು ಅಂದಾಜಾಗಿ ದಿಃ**03-02-2020** ರಂದು ತಹಶೀಲ್ದಾರರಿಗೆ ಅರ್ಜಿ ಕೊಟ್ಟು ಹದ್ದು ಬಸ್ತು ಸರ್ವೆ ಮಾಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆಯರ್ ಸದರಿ ಜಾಗದ ಅಕ್ಕ ಪಕ್ಕದ ಜಮೀನಿನವರಿಗೆ ನೋಟಿಸು ಕೊಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೂ ಮತ್ತು ನನ್ನ ತಾಯಿಗೆ ವಾದಿ ಮಾಡಿಸಿದ ಸರ್ವೆ ಬಗ್ಗೆ ನೋಟಿಸು ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನೋಟಿಸನ್ನು ನನ್ನ ತಾಯಿಗೆ ಕೊಟ್ಟಿದ್ದಾರೆ ವೈಯಕ್ತಿಕವಾಗಿ ನನಗೆ ತಿಳುವಳಿಕೆ ಇದೆ ಎಂದರೆ ಸರಿಯಲ್ಲ. ಸರ್ವೆ ಮಾಡುವ ಸಮಯದಲ್ಲಿ ನನ್ನ ತಾಯಿ ಸಹ ಅಲ್ಲಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಆರೋಗ್ಯವಾಗಿಲ್ಲ. ನನ್ನ ತಾಯಿ ಹೃದಯ

ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದಾರೆ ಆ ಬಗ್ಗೆ ದಾಖಲೆ ಕೊಟ್ಟಿಲ್ಲ. ಸರ್ವೆ ಮಾಡಿದ ಬಗ್ಗೆ ನನ್ನ ತಾಯಿಗೆ ಗೊತ್ತಿದ್ದು ಇಲ್ಲಿಗೆ ಬಂದರೆ ನಿಜ ಹೇಳಬೇಕಾಗುತ್ತದೆ ಎಂಬ ಕಾರಣದಿಂದ ನನಗೆ ಅಧಿಕಾರ ಪತ್ರ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ಮಾಡಿದ ದಿನ ವಾದಿಗೆ ಸರ್ವೆ ನಂ.**148/2** ರ ಮಾಲೀಕರು ಸರ್ವೆ ನಂ.**148/1** ರಲ್ಲಿ **42** ಸೆಂಟ್ ಜಾಗವನ್ನು ಒತ್ತುವರಿ ಮಾಡಿಕೊಂಡ ಬಗ್ಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ.

ಒತ್ತುವರಿ ಮಾಡಿದ ವಿಚಾರ ನನ್ನ ತಾಯಿ ಮತ್ತು ವಾದಿಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ವಾದಿ ನನ್ನ ತಾಯಿ ಬಳಿ ಒತ್ತುವರಿ ಮಾಡಿದ ಜಾಗವನ್ನು ವಾಪಸ್ಸು ಕೊಡಿ ಎಂದು ಕೇಳಿರುತ್ತಾರೆ ಎಂದರೆ ಸರಿಯಲ್ಲ. ದಿಃ**04-12-2020** ರಲ್ಲಿ ವಾದಿ ನನಗೆ ನೋಟಿಸು ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ನೋಟಿಸು ನನ್ನ ತಾಯಿಗೆ ತಲುಪಿದೆ ಎಂದರೆ ಸರಿ. ಆ ನೋಟಿಸಿಗೆ ಉತ್ತರ ಕೊಟ್ಟಿರುತ್ತೇನೆ. ಉತ್ತರ ಕೊಡಲು ನಮ್ಮ ವಕೀಲರನ್ನು ನನ್ನ ತಾಯಿ ಮತ್ತು ನಾನು ಬೇಟಿ ಮಾಡಿ ಮಾಹಿತಿ ಕೊಟ್ಟಿರುತ್ತೇವೆ. ಹದ್ದು ಬಸ್ತು ಸರ್ವೆ ಮಾಡುವವರೆಗೆ ನಾನು ಒತ್ತುವರಿ ಮಾಡಿದ ಬಗ್ಗೆ ವಾದಿಗೆ ಗೊತ್ತಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಬಿ ಷೆಡ್ಯೂಲ್ ನಲ್ಲಿ ವಿವರಣೆ ನೀಡಿದ ರೀತಿಯಲ್ಲಿ ನಾನು ಒತ್ತುವರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. **42** ಸೆಂಟ್ ಜಾಗವನ್ನು ಒತ್ತುವರಿ ಮಾಡಿ ಅಲ್ಲಿ ಬರುವ ಉತ್ಪತ್ತಿಯಿಂದ ನಾನು ಲಾಭ ಪಡೆಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಿಂದ ಪಡೆದ ಲಾಭವನ್ನು ನಾನು ವಾದಿಗೆ ಕೊಡಬೇಕು ಎಂದರೆ ಸರಿಯಲ್ಲ. ನಾನು

ಯಾವುದೇ ಒತ್ತುವರಿ ಮಾಡಿಲ್ಲ. ಸದರಿ ಜಾಗವನ್ನು ಸರ್ವೆ ಮಾಡಲು ನನ್ನ ತಕರಾರು ಇರುವುದಿಲ್ಲ. ಒತ್ತುವರಿ ಮಾಡಿದ ಜಾಗವನ್ನು ವಾದಿಗೆ ಬಿಟ್ಟು ಕೊಡಲು ಬಾದ್ಯಸ್ಥ ಎಂದರೆ ಸರಿಯಲ್ಲ. ಒತ್ತುವರಿ ಜಾಗವನ್ನು ವಾದಿ ಪಡೆಯಲು ಅರ್ಹರು ಎಂದರೆ ಸರಿಯಲ್ಲ. ಒತ್ತುವರಿ ಮಾಡಿದ ಜಾಗವನ್ನು ಬಿಟ್ಟು ಕೊಡಬೇಕಾಗುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.**148/1** ಕ್ಕೆ ವಾದಿಯೇ ಮಾಲೀಕರು ಎಂದರೆ ಸರಿ. ನನ್ನ ಅಜ್ಜಿ ಖರೀದಿ ಮಾಡಿದ **1** ಎಕರೆ ಜಾಗನ ಸರ್ವೆ ಮಾಡಿ ಪಡೆದುಕೊಂಡಿರುತ್ತಾರೆ. ಆದರೆ ನಂತರ ಒತ್ತುವರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಅಜ್ಜಿ ಮರಣದ ನಂತರ ನಾನು ಒತ್ತುವರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲು ಮುಕ್ತಾಯವಾಯಿತು.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು** ಮಾಡಲಾಗಿದೆ**).**

Sd/-
**ಓ ಹೇ ಕೇ ಸರಿ ಇದೆ**

**ಪ್ರ ದ ನ್ಯಾ ದಂ ಸೋ ಪೇಟೆ**